# ಸಾಹಿತ್ಯಸೇವೆಯೂ ಪೊರಕೆಯೂ

**ಪೊರಕೆ** ಮಾರುವವರು ಸಾಹಿತ್ಯದಿಂದ ದೂರ ಇರಬೇಕೆ?

ಅಕಟಕಟಾ, ಸಾಹಿತ್ಯಕ್ಕೂ ಪೊರಕೆ ವ್ಯಾಪಾರಕ್ಕೂ ಎಲ್ಲಿಯ ಸಂಬಂಧ! ಹೌದು, ಸಂಬಂಧ ಇರಬಾರದು! ಗುಡಿಸುವಂತಹದ್ದು ಸಾಹಿತ್ಯದಲ್ಲಿ ಏನಿದೆ? ಹಾಗೆ ಗುಡಿಸುವುದಾದರೂ ಅದು ಸಾಹಿತಿಗಳಿಂದಲೇ ಆಗಬೇಕಲ್ಲವೇ; ಮಧ್ಯದಲ್ಲಿ ಇತರರದೇನು ಪೊರಕೆಕ್ಷೇಪ! ಮೊನ್ನೆ ಪುಸ್ತಕಪ್ರೇಮಿಯೊಬ್ಬರು ಹೇಳಿದ್ದೂ ಅದನ್ನೇ– 'ಸಾಹಿತ್ಯ ಯಾರು ಯಾರಿಂದಲೋ ಅಪಚಾರಕ್ಕೆ ಒಳಗಾಗುತ್ತಿದೆ. ಪೊರಕೆ ಮಾರುವವರೆಲ್ಲ ಸಾಹಿತ್ಯ ಪತ್ರಿಕೆ ಮಾಡುವಂತಾಗಿದೆ'. ತಮ್ಮ ಅಳಲಿನ ಕೊನೆಗೆ ಅವರು ಉದ್ಗರಿಸಿದ್ದು– 'ಸಾಹಿತ್ಯಕ್ಕೆ ಅಪಚಾರ ಮಾಡುತ್ತಿರುವವರೆಲ್ಲ ನಾಶವಾಗಿ ಹೋಗುತ್ತಾರೆ!'.

ಪುಸ್ತಕಪ್ರೇಮಿಯ ಕೋಪಕ್ಕೆ ತಾಪಕ್ಕೆ ಶಾಪಕ್ಕೆ ಕಾರಣವಾದುದು ಒಂದು ಸಾಹಿತ್ಯಿಕ ಕಾರ್ಯಕ್ರಮ. ಸಾಹಿತ್ಯ ಪತ್ರಿಕೆಗಳ ಸ್ಥಿತಿಗತಿ ಬಗ್ಗೆ ಏರ್ಪಾಡಾಗಿದ್ದ ಕಾರ್ಯಕ್ರಮವದು. ಚರ್ಚೆಯಲ್ಲಿ ಕಿರುಪತ್ರಿಕೆಗಳನ್ನು ನಡೆಸುತ್ತಿರುವ ಸಂಪಾದಕ ಸಂಪಾದಕಿಯರು ತಮ್ಮ ಕಷ್ಟಸುಖಗಳನ್ನು ಓದುಗರ ಮುಂದೆ ಆಪ್ತವಾಗಿ ಆರ್ದ್ರವಾಗಿ ಬಿಚ್ಚಿಟ್ಟರು. ಈ ಕಾರ್ಯಕ್ರಮದ ವಿಷಯ ಪುಸ್ತಕಪ್ರೇಮಿಗೆ ಹೇಗೋ ತಿಳಿಯಿತು ನೋಡಿ, ಅವರು ಕುದ್ದುಹೋದರು. 'ನನ್ನಂಥ ಪುಸ್ತಕಪ್ರೇಮಿಯನ್ನು, ಕಿರುಪತ್ರಿಕೆಯೊಂದನ್ನು ನಡೆಸುತ್ತಿರುವ ದಣಿವರಿಯದ ಸಹೃದಯನನ್ನು ನಿರ್ಲಕ್ಷಿಸಿ ಇಂಥದೊಂದು ಸಮಾರಂಭ ನಡೆಯಿತಲ್ಲ' ಎನ್ನುವ ನೋವು ಅವರದ್ದು. ಸುಮ್ಮನೆ ನೊಂದರೆ ಏನು ಫಲ? ತಮ್ಮ ನೋವನ್ನು ತೋಡಿಕೊಂಡೇ ಹಗುರಾಗುವುದು ಎಂದು ನಿರ್ಧರಿಸಿದ ಅವರು, ಚರ್ಚೆಯಲ್ಲಿ ಭಾಗವಹಿಸಿದವರನ್ನು ಒಬ್ಬೊಬ್ಬರನ್ನಾಗಿ ತರಾಟೆಗೆ ತೆಗೆದುಕೊಂಡರು. ಕೊನೆಯ ಸರದಿ, ಆಯೋಜಕರದ್ದು. ಸಂಘಟಕರ ಸಾಹಿತ್ಯಪ್ರೇಮವನ್ನು ಸಾರಾಸಗಟಾಗಿ ತಿರಸ್ಕರಿಸಿದ ಅವರು, 'ಪೊರಕೆ ಮೀಮಾಂಸೆ' ಮಂಡಿಸಿದರು.

ಪುಸ್ತಕ ಪ್ರೇಮಿಯ ಕೋಪತಾಪ ಬದಿಗಿರಲಿ, ಅವರು ಎತ್ತಿದ ಪ್ರಶ್ನೆಯಂತೂ ಸ್ವಾರಸ್ಯಕರವಾಗಿದೆ– ಪೊರಕೆ ಮಾರುವವರಿಂದ ಎಂಥ ಸಾಹಿತ್ಯ ಸೇವೆ? ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವುದು ಬಿಟ್ಟು ಸಂಘಟಕರು ಮತ್ತೂ ಹುಮ್ಮಸ್ಸಿನಿಂದ ಸಾಹಿತ್ಯ ಪರಿಚಾರಿಕೆ ನಡೆಸುತ್ತಿದ್ದಾರಂತಲ್ಲ– ಎಂಥ ನಿರ್ಲಜ್ಜೆ!

–ಮಹತಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68